ಇಂಡ್ಯಗವರ್ನಮೆಂಟಿನವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು ವಗ್ಯೆರೆ.

ಫಾರೆ ಡಿಪಾರ್ಟ್ ಮೆಂಟ್.

ಇಸ್ತಿಹಾರ್ ನಾಮೆ.

ಪೊಲಿಟಿಕಲ್.

ಸಿಂಲಾ, ತಾರೀಖು 18ನೇ ಆಗಸ್ಟ್ 1876.

ನಂಬರ್ 1891 P.

ಪ್ರಶಿದ್ಧ ಪತ್ರಿಕೆ.

ಸ್ಯ ಸಾವಿರದ ಯೆಂಟನೂರ ಯಪ್ಪತ್ತಾರನೇ ಇಸವಿ ಏಪ್ರಿಲ್ ಯಿಪ್ಪತ್ತೇಳನೇ ತಾರೀಖಿನಲ್ಲಿ, ಗ್ರೇಟ್ ಬ್ರಿಟ್ಯ ವ ಐರ್‌ಲ್ಯಾಂಡ್ ರಾಜ್ಯಗಳ ಮಹಾ ರಾಣಿಯವರ ಪಾರ್ಲಿ ಮೆಂಟಿನಿಂದ ಜಾರೀಮಾಡೆಲ್ಪಟ್ಟ ಮಹಾ ಘನವನ್ನು ಹೊಂದಿದ ಇಂಡ್ಯ ಸೆಕರ್‌ಟೇರಿ ಆಫ್ ಸ್ಟೇಟ್ ಯವರಿಂದ ಅವರ 1876ನೇ ಜುಲೈ 13ನೇ ಮಕ್ಕಂ 70ನೇ ನಂಬರ್ ಡೆಸ್‌ಪಾಚ್ (ಯಾನೆ ಲೆಟರ್) ನ್ನಲ್ಲಿ ಈ ಗವರ್ನಮೆಂಟಿಗೆ ಕಳುಹಿಸೋಣಾದ, ಈ ಕೆಳಗೆ ಬರುವ ಆಕ್ಟ್‌ನ್ನು, ಮತ್ತು ಶ್ರೀಮನ್ಮಹಾ ರಾಣಿಯವರ ಆಧಿ ಪತ್ಯದ ಮುವತ್ತೊಂಬತ್ತನೆಯ ವರ್ಷವಾದ ಸ್ಯ ಸಾವಿರ ದೆಂಟುನೂರ ಯೆಪ್ಪತ್ತಾರನೇ ಇಸವಿ ಏಪ್ರಿಲ್ ಯಿಪ್ಪತೆಂಟನೇ ಮಕ್ಕಂನಲ್ಲಿ ವಿಂಡಸರ್ ಮಹಾಸ್ಥಾನದೊಳಗೆ ಶ್ರೀಮನ್ಮಹಾ ರಾಣಿಯವರ ಇಸ್ತಿಹಾರ್ ನಾಮೆ ಸಹಿತ ಗವರ್ನರ್‌ಗಳು, ಅಡ್‌ಮಿನಿಸ್ಟ್ರೇಟರ್‌ಗಳು (ರಾಜ್ಯಕಾರ್ಯ ನಿರ್ವಾಹಕರಾದ ಅಧಿಕಾರಿಗಳು, ಅರಸರು, ಸಂಸ್ಥಾನಾಧಿಪತಿಗಳು, ಪ್ರಮುಖರು. ಮತ್ತು ಈ (ಇಂಡ್ಯ) ರಾಜ್ಯದ ಆಯಾ ಪ್ರಜೆಗಳು ಇವರುಗಳ ತಿಳುವಳಿಕೆಬಗ್ಯೆ, ಇಂಡ್ಯ ದೇಶದ ವೈಸರಾಯಿ (ಯಾನೆ ಮಹಾರಾಣೀ ಪ್ರತಿನಿಧಿಗಳಾದ) ಮತ್ತು ಗವರ್ನರ್ ಜನರಲ್ಲಾದ ನಾನು ಇದರಪೆಸೆಯಿಂದ ಪ್ರಕಟಿಸುತ್ತೇನೆ.

ಇದಲ್ಲದೆ ಈ ನನ್ನ ರುಜು ಮೊಹರ್ ನಿಶೀ ಈಗ ನಾನು ಪ್ರಕಟವಾಗಿ ತಿಳಿಸುವದೇನಂದರೆ, ಶ್ರೀಮನ್ಮಹಾ ರಾಣಿಯವರು, ತಮ್ಮ ಆಧಿಪತ್ಯಕ್ಕೊಳಗಾದ, ಮಹತ್ತಾದ ಈ ಇಂಡ್ಯ ರಾಜ್ಯದ ವಿಷಯದಲ್ಲಿ ತಮ್ಮಗಿರುವ ಸಂಬಂಧವನ್ನೂ ಇಂಡ್ಯ ದೇಶದ ಅರಸರು, ಪ್ರಜೆಗಳು ಯಿವರುಗಳ ಭಕ್ತಿ ವಿಶ್ವಾಸಗಳಲ್ಲಿ ಆಕೆಯವಂಗೆ ಯಿರುವ ನಂಬಿಕೆಯನ್ನೂ, ಪ್ರಕಟವಾಗಿ ತೋರಿಸುವಬಗ್ಯೆ ಮುಖ್ಯವಾಗಿ ಉದ್ದೇಶಿಸಲ್ಪಟ್ಟ, ಘನವಾದ ತಮ್ಮ ಹೆಸರಿಗೂ ಬಿರುದಾವಳಿಗೂ, ಬಂದೂ ಹೆಚ್ಚಿಗೆ ಅಂಕವನ್ನು ಸೇರಿಸಬೇಕೆಂದು ಮಹ ನೀಯರಾದ ಆಕೆಯವರಿಗೆ ಹುಟ್ಟಿದ ಘನವಾದ ತಾತ್ಪರ್ಯವನ್ನು ಇಂಡ್ಯ ದೇಶದೊಳಗೆ ಸರ್ವತ್ರ ಇರುವ ಆಕೆಯವರ ಪ್ರಜೆಗಳಿಗೆ ಪ್ರಕಟವಾಗಿ ತಿಳಿಸುವಬಗ್ಯೆ ಸ್ಯ 1877ನೇ ಜನವರಿ ಗುರ್ಯೇ ತಾರೀಖಿನಲ್ಲಿ ಡೆಲ್ಲಿ ಪಟ್ಟಣದೊಳಗೆ ಒಂದು ರಾಜ ಸಭೆ ನೇರಿಸಬೇಕೆಂದು ನನ್ನ ಉದ್ದೇಶವಿದೆ.

ಈ ಸಭೆಗೆ, ಶ್ರೀಮನ್ಮಹಾ ರಾಣಿಯವರ, ಇಂಡ್ಯ ರಾಜ್ಯದೊಳಗಣ, ಸರ್ವ ಪ್ರದೇಶಗಳಿಂದಲೂ, ಗವರ್ನರ್‌ಗಳು, ಲೆಫ್ಟೆನೆಂಟ್ ಗವರ್ನರ್‌ಗಳು, ಆಯಾ ರಾಜ್ಯಭಾರಗಳ ಮುಖ್ಯಾಧಿಕಾರಿಗಳು, ಮತ್ತು ಯಾರಲ್ಲಿ ಪ್ರಾಚೀನತೆಯೂ ವರ್ತಮಾನ ಕಾಲದ ಪ್ರಾಭವವೂ ನೇರಿ ಯಿವೆಯೋ ಮತ್ತು ಯಾರು ಮಹತ್ತಾದ ಈ ರಾಜ್ಯದ ವಿಭವಕ್ಕೂ, ಸ್ಥೈರ್ಯಕ್ಕೂ ಯೋಗ್ಯವಾದ ಸಹಾಯ ವೆಂಟು ಮಾಡುತ್ತಾರೋ ಅಂತಾ ಅರಸರು, ಸಂಸ್ಥಾನಾಧಿಪತಿಗಳು, ಮತ್ತು ಪ್ರಮುಖರು, ಯಿವರುಗಳನ್ನು ಕರೆಯಬೇಕೆಂದು ನಾನು ಅಪೇಕ್ಷಿಸುತ್ತೇನೆ.

ಚರಿತ್ರೆಗೆ ಸಂಬಂಧಿಸತಕ್ಕ ಪ್ರಕೃತ ವಿಷಯದ ಮುಖ್ಯತೆಗೆ ಅರ್ಹವಾದ ರೀತಿಯಿಂದಲೂ, ಇಂಡ್ಯ ದೇಶದಲ್ಲಿ ಶ್ರೀಮನ್ಮಹಾ ರಾಣಿಯವರ ಸರ್ವ ಪ್ರಜೆಗಳೂ, ಘನಮಹಿಮರಾದ ತಮ್ಮ ರಾಣಿಯವರ ವಿಷಯದಲ್ಲಿ ತಾವ್ಗಳು ಪಡೆದಿರುವ ಪ್ರೀತಿಯನ್ನು ವಿಶೇಷ ಸಂಭ್ರಮದಿಂದಲೂ, ರಾಜ ಭಕ್ತಿ ಪ್ರದರ್ಶಕಗಳಾದ ವಿನೋದಗಳಿಂದಲೂ, ತೋರಿಸಬೇಕೆಂಬ ಅವರ ಅಪೇಕ್ಷೆಗೆ ಅನುರೂಪವಾಗಿಯೂ ಯಿರುವ ಹುಕ್ಕುಂಗಳನ್ನು ಮಂತ್ರಾಲೋಚಕ ಸಭೆಯಲ್ಲಿ ಕ್ಷಿಪ್ರದೊಳಗೇನೇ ಕೊಡುವೆನು.

ಮೊಕ್ಕಾಂ ಸಿಂಲಾ, ತಾರೀಖು ಹದಿನೆಂಟನೇ ಆಗಸ್ಟು ಸ್ಯ 1876ನೇ ಇಸವಿ. (ದಸ್ತಖತ್) ಲಿಟ್ಟನ್.

ಸದರೀ ಡಿಸ್‌ಪಾಚ್ಚಿಗೆ ಸೇರಿಸಲ್ಪಟ್ಟದ್ದು.

(39ನೇ ವಿಕ್ಟೋರಿಯಃ ಚಾಪ್ 10.)

ನಂ. 1. ಯೂನೈಟೆಡ್ ಕಿಂಗ್‌ಡಂ ಮತ್ತು ಅದಕ್ಕೆ ಒಳಪಟ್ಟ ರಾಜ್ಯಗಳ ಅರಸುತನಕ್ಕೆ ಸೇರಿದ ಹೆಸರಿಗೂ ಬಿರುದಾವಳಿಗೂ ಬಂದಂಥ ಸೇರಿಸುವದಕ್ಕೆ ಆಕೆಯವರಿಗೆ ಸಾಧ್ಯವಾಗುವದಕ್ಕೋಸ್ಕರ ಹುಟ್ಟಿದ ಆಕ್ಟು (27ನೇ ಏಪ್ರೆಲ್ 1876ನೇ ಇಸವಿ) { ಕ್ರಿ॥ ಶ॥ 1876

(1876ನೇ ಜೂನ್ 29ನೇ ಮಕ್ಕಂ (ಲೆಜಿಸ್ ಲೇಟಿವ್) 28ನೇ ನಂಬರ್ ಉಳ್ಳ ಸ್ಟೇಟ್ ಸೆಕರ್‌ಟೇರೀಯವರ ಡಿಸ್‌ಪ್ಯಾಚ್‌ನಲ್ಲಿ ಕಳುಹಿಸೋಣಾದ್ದು.)

ಗ್ರೇಟ್ ಬ್ರಿಟ್ಟ ವ ಐರ್‌ಲ್ಯಾಂಡ್ ೀವೆಗಳನ್ನು ಸೇರಿಸುವಬಗ್ಯೆ ಮಹಾ ರಾಜರಾದಸಾಬಕು ಮೂರನೇ ಜಾರ್ಜ್‌ಯವರ ಆಳ್ವಿಕೆಯ ನಾಲ್ವತ್ತನೇ ವರುಷದಲ್ಲಿ ಹುಟ್ಟಿದ ಆಕ್ಟಿನ ಅರವತ್ತೇಳನೇ ಚಾಪ್ಟರಿನಿಂದ, ಮೇಲೆ ಕಂಡಂತೆ ಸೇರಿಸಲ್ಪಟ್ಟ ಬಳಿಕ, ಯೂ ನೈಟೆಡ್ ರಾಜ್ಯದ ಮತ್ತು ಅದಕ್ಕೆ ವಳೆತಗಳಾದ ರಾಜ್ಯಗಳ ಅರಸುತನಕ್ಕೆ ಸಂಬಂಧಿಸಿದ ಹೆಸರೂ, ಬಿರುದುಗಳೂ, ಮಹಾ ರಾಜರವರು ಯೂ ನೈಟೆಡ್ ರಾಜ್ಯದ ದೊಡ್ಡ ಮೊಹರ್ ನಿಸೀ ಕೊಡಲ್ಪಡುವ ರಾಜಕೀಯ ಪ್ರಕಟನೆಯ ಮೂಲಕ ಯಾವವುಗಳನ್ನು ನಿಯಮಿಸುತ್ತಾರೋ ಅವುಗಳೇ ಯಿರತಕ್ಕವು;

ಸ್ಸ 1800ನೇ ಇಸವಿ 67ನೇ ಚಾಪ್ಟರ್ 111—39 ವ 40 G.

ಮತ್ತು, ಸದರೀ ಆಕ್ಟಿನ ಬಲದಿಂದಲೂ, ಸ್ಸ ಸಾವಿರದ ಎಂಟನ್ನೂರ ಬಂದನೇ ಇಸವಿ ಜನವರೀ ಬಂದನೇ ತಾರೀಖು ಉಳ್ಳ ಮತ್ತು ದೊಡ್ಡ ಮೊಹರ್ ನಿಸೀ ಕೊಡಲ್ಪಟ್ಟ ರಾಜಕೀಯ ಇಸ್ತಿಹಾರ್ ನಾಮೆಯ ಬಲದಿಂದಲೂ, ಮಹಾ ರಾಣೀಯವರ ಈಗಿನ ಹೆಸರೂ ಬಿರುದುಗಳೂ "ದೇವರ ಅನುಗ್ರಹದಿಂದ ಗ್ರೇಟ್ ಬ್ರಿಟ್ಟ ವ ಐರ್ ಲ್ಯಾಂಡ್ ಸೀಮೆಗಳ ಸೇರಿಕೆಯಾವ ರಾಜ್ಯದ ವಿಕ್ಟೋರಿಯಾ ಮಹಾ ರಾಣೀಮತಸಂರಕ್ಷಕಿ," ಯೆಂಬವುಗಳಾಗಿರುತ್ತವೆ.

ಪ್ರಕೃತ ಮಹಾ ರಾಣಿಯವರ ಆಧಿಪತ್ಯದ ಯಿಪ್ಪತ್ತೊಂದನೇ ವ ಯಿಪ್ಪತ್ತೆರಡನೆಯ ವರುಷದ ಸೆಕ್ಷನ್‌ನಲ್ಲಿ ಹುಟ್ಟಿದ ಇಂಡ್ಯ ರಾಜ್ಯವನ್ನು ಯಿನ್ನೂ ಚನ್ನಾಗಿ ಪಾಲಿಸುವದಕ್ಕೋಸ್ಕರ ಆದ ಆಕ್ಟಿನ ನೂರ ಆರನೇ ಚಾಪ್ಟರ್ ದೆಸೆಯಿಂದ, ತತ್ಪೂರ್ವ ಆಕೆಯವರಿಗೋಸ್ಕರ ಈಸ್ಟ್ ಇಂಡಿಯಾ ಕಂಪನಿಯವರ ವಶವಾಗಿದ್ದ ಇಂಡ್ಯ ರಾಜ್ಯದ ಆಳ್ವಿಕೆಯು ಮಹಾ ರಾಣೀಯವರಿಗೆ ಸೇರಬೇಕೆಂತಲೂ, ಇಂಡ್ಯ ರಾಜ್ಯವು ಅದು ಮೊದಲು ಮಹಾ ರಾಣಿಯವರಿಂದಲೂ, ಆಕೆಯವರ ಹೆಸರಿನಲ್ಲಿಯೂ, ಪರಿಪಾಲಿಸಲ್ಪಡತಕ್ಕದ್ದೆಂತ್ತಲೂ ನಿರ್ಣಯಿಸಲ್ಪಟ್ಟೀತು ಮತ್ತು ಹಾಗೆ ಮಾಡಲ್ಪಟ್ಟ ರಾಜ್ಯ ಭಾರದ ವಿನಿಮಯವನ್ನೂ, ಮಹಾ ರಾಣಿಯವರ ಹೆಸರಿಗೂ, ಬಿರುದುಗಳಿಗೂ ಹೆಚ್ಚಿನ ವಂಶವನ್ನ ಸೇರಿಸುವದರ ಮೂಲಕ ಅಂಗೀಕರಿಸುವದು ಯುಕ್ತವಾಗಿರುತ್ತೆ.

21 ವ 22ನೇ ವಿಕ್ಟೋರಿಯಾ ಚಾಪ್ಟರ್ 106.

ಆದದರಿಂದ, ಮಹಾ-ಘನವನ್ನು ಹೊಂದಿದ ರಾಣೀಯವರಿಂದ, ಸ್ಪಿರಿಚ್ಯುಯಲ್ ವ ಟೆಂಪೋರೆಲ್ ಲಾರ್ಡ್‌ಗಳ ಮತ್ತು ಪ್ರಕೃತ ಪಾರ್ಲಿಮೆಂಟ್ ಸಮಾಜದೊಳ್ಗು ಸೇರಿ ಯಿರುವ ಕಾರ್ಯಕ್ಕಗಳ ಸಲಹಾ ಮತ್ತು ಅಂಗೀಕಾರದಿಂದ ಮತ್ತು ಅವುಗಳೊಡನೆ ಮತ್ತು ಅವರ ಅಧಿಕಾರದಿಂದ ಈ ಕೆಳಗೆ ಕಂಡ ಪ್ರಕಾರ ನಿರ್ಣಯಿಸಲ್ಪಟ್ಟಿರುತ್ತೇನಂದರೆ.

ಅರಸುತನದ ಹೆಸರಿಗೂ ಬಿರುದುಗಳಿಗೂ ಅಧಿಕಾಂಶ ಸೇರಿಸಲಿಕ್ಕೆ ಮಹಾರಾಣೀಯವರಿಗೆ ಅಧಿಕಾರ.

ಮಹಾ ಘನವನ್ನು ಹೊಂದಿದ ೀವೆಮ್ಮಹಾ ರಾಣೀಯವರು ಇಂಡ್ಯ ರಾಜ್ಯ ಭಾರದ ವಿನಿಮಯವನ್ನು ಯೂ ನೈಟೆಡ್ ರಾಜ್ಯದ ದೊಡ್ಡ ಮೊಹರ್ ನಿಸೀ ಕೊಡಿಸಲ್ಪಟ್ಟ ಮಹಾ ರಾಣೀಯವರ ಇಸ್ತಿಹಾರ್‌ನಾಮೇಯ ಮೂಲಕ ಸದರೀ ಮೇರೆ ಅಂಗೀಕರಿಸುವ ತಾತ್ಪರ್ಯದೊಡನೆ, ಯೂನೈಟೆಡ್ ರಾಜ್ಯ ಮತ್ತು ಅದಕ್ಕೆ ವೆಳೆತಗಳಾದ ರಾಜ್ಯಗಳ ಅರಸುತನಕ್ಕೆ ಹಾಲೀ ಸೇರಿ ಯಿರುವ ಹೆಸರಿಗೂ ಬಿರುದುಗಳಿಗೂ ಮಹಾ ರಾಣೀಯವರಿಗೆ ಯುಕ್ತವೆಂದು ತೋರುವಂತಾ ಹೆಚ್ಚಿಗೆ ಅಂಕವನ್ನು ಸೇರಿಸೋಣವು ಆಕೆಯವರಿಗೆ ನ್ಯಾಯವಾಗಿರತಕ್ಕದ್ದು.

ನಂ. 2. ಇಂಡ್ಯ ಆಫಿಸ್, ತಾರೀಖು 13ನೇ ಜುಲೈ 1876ನೇ ಇಸವಿ 70ನೇ ನಂಬರ್.

ಮಹಾ ರಾಣೀ ಯವರ ಇಂಡ್ಯ ಸ್ಟೇಟ್ ಸೆಕರೆಟೇರಿಯವರಿಂದ.

ಇಡ್ಯಾ ಗವರ್ನ್‌ಮೆಂಟಿಗೆ.

ಘನವನ್ನು ಹೊಂದಿದ ತಮ್ಮ ಗವರ್ನ್‌ಮೆಂಟಿನ ತಿಳುವಳಿಕೆಯಬಗ್ಗೆ, "ಎಂಪೈಸ್ ಆಪ್ ಇಂಡ್ಯ" ಅಂದರೆ ಇಂಡ್ಯ ಚಕ್ರವರ್ತಿನೀಯೆಂಬ ಬಿರುದನ್ನು ಮಹಾ ರಾಣಿಯವರು ವಹಿಸಿದ ಸಂಗತಿಯನ್ನು ಪ್ರಕಟಪಡಿಸುವಬಗ್ಗೆ ಸಾದರವಾದ ಮಹಾ ರಾಣೀಯವರ ಇಸ್ತಿಹಾರ್ ನಾಮೆಯ ನಕಲನ್ನು ಇದರ ಸಂಗಡ ಕಳುಹಿಸುತ್ತೇನೆ.

2. ಮಹಾ ರಾಣಿಯವರ ಈ ಕಾರ್ಯವು, ಇಂಡ್ಯ ದೇಶದ ಅರಸರು, ಪ್ರಜೆಗಳು ಇವರುಗಳ ವಿಷಯದಲ್ಲಿ ಆಕೆಯವರು ಯಾವಾಗ್ಯೂ ಪಡೆದಿರುವ ಅನುಕೂಲಗಳಾದ ತಾತ್ಪರ್ಯಗಳನ್ನು ಕ್ರಮವಾಗಿಯೂ, ನಿರ್ಧಾರಕವಾಗಿಯೂ ವ್ಯಕ್ತ ಪಡಿಸುತಿದೆ ಈ ಬಗ್ಗೆ ಈ ಸಮಯವು ಕೇವಲ ಯುಕ್ತವಾದ್ದೆಂದು ಮಹಾ ರಾಣೀಯವರಿಗೆ ತೋರಬಂತು. ಘನವನ್ನು ಹೊಂದಿದ ತಾವು ಮಹಾ ರಾಣೀಯವರ ಇಂಡ್ಯ ರಾಜ್ಯಗಳೊಳು ಸರ್ವತ್ರ, ಆಕೆಯವರ ಘನವಾದ ತಾತ್ಪರ್ಯಕ್ಕೆ ಅನುಗುಣವಾದ ರೀತಿಯಿಂದ ಪ್ರಕಟ ಪಡಿಸಬೇಕೆಂದು ಕೋರುತ್ತೇನೆ.

(ದಸ್ತಖತ್) ಸಾಲಸ್ ಬರಿ,

ಮಹಾರಾಣೀ ಯವರಿಂದ ಕೊಡಲ್ಪಟ್ಟ ಇಸ್ತಿಹಾರ್ ನಾಮೆ.

ವಿಕ್ಟೋರಿಯ ರಿಜಿನಾ.

"ಯೂನೈಟೆಡ್ ರಾಜ್ಯದ ಮತ್ತು ಅದಕ್ಕೆ ಬಳಪಟ್ಟು ರಾಜ್ಯಗಳ ಅರಸುತನಕ್ಕೆ ಸಂಬಂಧಿಸಿದ ಹೆಸರಿಗೂ, ಬಿರುದುಗಳಿಗೂ ಹೆಚ್ಚಳವನ್ನು ಸೇರಿಸಲಿಕ್ಕೆ ಮಹಾರಾಣೀಯವರಿಗೆ ಸಾಧ್ಯವಾಗುವಬಗ್ಗೆ ಹುಟ್ಟಿದ ಆಕ್ಟು" ಯೆಂದು ಕರೆಯಲ್ಪಡುವ ಬಂದು ಆ ಕ್ಟು ಪಾರ್ಲಿಮೆಂಟ್ ಸಭೆಯ ಪ್ರಕೃತ ಸೆಷನ್ನಲ್ಲಿ ಜಾರೀ ಮಾಡಲ್ಪಟ್ಟಿತು, ಸದರೀ ಆಕ್ಟು ಹೇಳುವದೇನಂದರೆ, ಗ್ರೇಟ್ ಬ್ರಿಟನ್ ವ ಐರ್ಲ್ಯಾಂಡ್ ರಾಜ್ಯಗಳ ಸೇರಿಕೆಯಬಗ್ಗೆ ಏರ್ಪಟ್ಟ ಆಕ್ಟಿನಿಂದ, ಹಾಂಗೆ ಸೇರಿಕೆ ಆದಮೇಲೆ ಸೇರಿಸಲ್ಪಟ್ಟ ರಾಜ್ಯದ ಮತ್ತು ಅದಕ್ಕೆ ಬೆಳೆತಗಳಾದ ರಾಜ್ಯಗಳ ಅರಸುತನಕ್ಕೆ ಸಂಬಂಧಿಸಿದ ರಾಜರ ಹೆಸರೂ, ಬಿರುದುಗಳೂ, ಘನವನ್ನು ಹೊಂದಿದ ಮಹಾ ರಾಜರವರು, ಸೇರಿಸಲ್ಪಟ್ಟ ರಾಜ್ಯದ ದೊಡ್ಡ ಮೊಹರ್‌ನಿಸೀ ಕೊಡತಕ್ಕ ತಮ್ಮ ರಾಜಕೀಯ ಇಸ್ತಿಹಾರ್ ನಾಮೆಯಿಂದ ಯಾವದನ್ನು ನಿಯವಿಸುತ್ತಾರೋ ಅವುಗಳಾಗಿರತಕ್ಕವೆಂದು ವಿಧಿಸಲ್ಪಟ್ಟಿದೆಯೆಂಬದು: ಸದರೀ ಆಕ್ಟು ಮತ್ತು ತಿಳಿರೂವದೇನಂದರೆ, ಐರ್ಲ್ಯಾಂಡ್ ಆಕ್ಟಿನ ಬಲದಿಂದಲೂ, ದೊಡ್ಡ ಮೊಹರ್ ನಿಸೀ 1801ನೇ ಇಸವಿ ಜನವರೀ ಗುರ್ಯೇ ತಾರೀಖಿನೊಳಗೆ ಕೊಡಲ್ಪಟ್ಟ ರಾಜಕೀಯವಾದ ಇಸ್ತಿಹಾರ್ ನಾಮೆಯ ಬಲದಿಂದಲೂ, ಈಗಿನ ನಮ್ಮ ಹೆಸರೂ ಬಿರುದುಗಳೂ 'ಭಗವಂತನ ಅನುಗ್ರಹದಿಂದ ಗ್ರೇಟ್ ಬ್ರಿಟನ್ ಮತ್ತು ಐರ್ಲ್ಯಾಂಡ್ ಇವುಗಳ ಸೇರಿಸಲ್ಪಟ್ಟ ರಾಜ್ಯದ ವಿಕ್ಟೋರಿಯಾರಾಣೀಯವರ ಮತಸಂರಕ್ಷಕರು" ಎಂಬವುಗಳಾಗಿರುತ್ತವೆ, ಸದರೀ ಆಕ್ಟು ಇನ್ನೂ ತಿಳಿಸುವದೇನಂದರೆ, ಇಂಡ್ಯ ದೇಶವೆನ್ನು ಮತ್ತು ಚನ್ನಾಗಿ ಆಳುವದಕ್ಕೋಸ್ಕರ ಹುಟ್ಟಿದ ಆಕ್ಟಿನ ದೆಸೆಯಿಂದ ಅದುವರೆಗೂ ನಮ್ಮ ತರಫ್‌ನಲ್ಲಿ ಈಸ್ಟಿಂಡಿಯಾ ಕಂಪೆನಿಯವರ ವಶವಾಗಿದ್ದ ಇಂಡ್ಯ ರಾಜ್ಯಭಾರವು ನಮಗೆ ಸೇರತಕ್ಕದ್ದೆಂತಲೂ, ಮತ್ತು ಇಂಡ್ಯ ರಾಜ್ಯವು ಅದುವೊದಲು ನಮ್ಮಿಂದಲೂ ನಮ್ಮ ಹೆಸರಿನಿಂದಲೂ ಆಳಲ್ಪಡತಕ್ಕದ್ದೆಂತಲೂ, ಮತ್ತು ನಮ್ಮ ಹೆಸರಿಗೂ, ಬಿರುದುಗಳಿಗೂ ಸೇರಿಸಲ್ಪಡತಕ್ಕ ಹೆಚ್ಚಳಕದ ದೆಸೆಯಿಂದ ಸದರೀ ಮೇರೆ ಮಾಡಲ್ಪಟ್ಟ ಆಳ್ವಿಕೆಯ ವಿನಿಮಯವನ್ನು ಅಂಗೀಕರಿಸಬೇಕಾದ್ದು ಜರೂರೆಂಬದಾಗಿಯೂ ನಿರ್ಣಯಿಸಲ್ಪಟ್ಟಿತು, ಸದರೀ ಆಕ್ಟು ಮೇಲೆ ನವೂದಿಸಿದ ಮೇರೆ ತಿಳಿಸಿದ ಬೇಕ ಇಂಡ್ಯ ರಾಜ್ಯ ಭಾರದ ವಿನಿಮಯವನ್ನು ಆ ಪ್ರಕಾರ ಅಂಗೀಕರಿಸುವ ಉದ್ದೇಶದಿಂದ, ಸೇರಿಸಲ್ಪಟ್ಟ ರಾಜ್ಯದ ದೊಡ್ಡ ಮೊಹರ್ ನಿಸೀ ಕೊಡಲ್ಪಡುವ ನಮ್ಮ ಇಸ್ತಿಹಾರ್ ನಾಮೇಮೂಲಕ, ಸೇರಿಸಲ್ಪಟ್ಟ ರಾಜ್ಯದ ಮತ್ತು ಅದಕ್ಕೆ ಬಳಪಟ್ಟ ರಾಜ್ಯಗಳಿಗೆ ಸೇರಿದ ಪ್ರಕೃತ ಹೆಸರಿಗೂ, ಬಿರುದುಗಳಿಗೂ ಯುಕ್ತವೆಂದು ನಮಗೆತೋರುವ ಅಧಿಕಾಂಕವನ್ನು ಸೇರಿಸುವದು ನಮಗೆನ್ಯಾಯವಾಗಿರತಕ್ಕದ್ದೆಂದು ನಿರ್ಣಯಿಸುತದೆ. ನಮ್ಮ ಪ್ರಿವೀಕೌನ್ಸೆಲ್ ಎಂಬ ಮಂತ್ರಾಲೋಚಕರ ಸಲಹೇಯಿಂದ ಮತ್ತು ಸಲಹೇಯೊನೆ ನಿಯಮಿಸುವದೂ ತಿಳಿಸುವದು ಯುಕ್ತವೆಂದು ಪರಾಮರಿಸಿದೆವು ಆದದರಿಂದ ನಾವು ಸದರೀ ಸಲಹೇಯಿಂದ ವ ಸಲಹೇಯೊಡನೇ ನಿಯಮಿಸುವದು ತಿಳಿಸುವದೇನಂದರೆ, ಅಯಿಂದ ಯೂನೈಟೆಡ್ ರಾಜ್ಯದ ಆಜಿಗೆ ಜಾರೀಯಾಗದ ದರೋಬಸ್ತು ಚಾರ್ಟರ್‌ಗಳೆಂಬ ಶಾಸನಗಳು ಕಮ್ಮಿಷ್ಟ, ಲೆಟ್ಟರ್ಸ್‌ಪೇಟೆಂಟ್‌ಗಳು, ಗ್ರಾಂಟ್‌ಗಳು ರಿಟ್‌ಗಳು, ಅಪ್ಪಾಯಿಂಟ್‌ಮೆಂಟ್‌ಗಳು ಎಂಬ ಜೇಕೇಜೇರೇ ವಿಧವುಳ್ಳ ಅಧಿಕಾರ ಪತ್ರಿಕೆಗಳುಇಂತಾ ಇತರ ಸಾಧನಗಳೂ ಯಿವುಗಳ, ಹೊರತು ನಮ್ಮ ಹೆಸರೂ ಬಿರುದುಗಳೂ ಉಪಯೋಗಿಸಲ್ಪಡುವ ಮಿಕ್ಕ ದರೋಬಸ್ತು ದಸ್ತಾವೇಜುಗಳಲ್ಲಿಯೂ, ಅನುಕೂಲಿಸಿದ ಷ್ಟು ಮಟ್ಟಿಗೆ ಮತ್ತು ಯಲ್ಲ ಸಂದರ್ಭಗಳೊಳಗೂ, ಈ ಕೆಳಗೆ ಬರುವ ಅಧಿಕಾಂಕವು, ಸೇರಿಸಲ್ಪಟ್ಟ ರಾಜ್ಯದ ಮತ್ತು ಅದಕ್ಕೆ ಬಳಪಟ್ಟ ರಾಜ್ಯಗಳ ಅರಸುತನಕ್ಕೆ ಪ್ರಕೃತ ಸಂಬಂಧಿಸಿ ಯಿರುವ ಹೆಸರಿಗೂ ಬಿರುದುಗಳಿಗೂ ಸೇರಿಸಲ್ಪಡತಕ್ಕದ್ದು ಅದು ಯಾವದರೆ. ಲ್ಯಾಟಿನ್ ಭಾಷೆಯಲ್ಲಿ "ಇಂಡ್ಯ ಇಂಪೆರಟ್ರಿಕ್ಸ್" ಇಂಗ್ಲಿಷ್‌ನಲ್ಲಿ "ಎಂಪ್ರೆಸ್ ಆರ್ ಇಂಡ್ಯ" (ಅಂದರೆ ಇಂಡ್ಯ ಚಕ್ರವರ್ತಿನೀಯೆಂದರ್ಥವೆ.)

ಮತ್ತು ನಮ್ಮ ನಿಶ್ಚಯವೂ ಇಷ್ಟವೂ ಯಿರುವದೇನಂದರೆ, ಸದರೀ ಅಧಿಕಾರವು ಹಿಂದೆ ಕಂಪತ್ತು ವಿನಾಯಿಸಲ್ಪಟ್ಟ, ಕಮ್ಮಿಷ್ಟರ್ಗಳು; ಚಾರ್ಟರ್ಗಳು; ಲೆಟರ್ಸ್ ಪೇಟೆಂಟ್ಗಳು, ಗ್ರಾಂಟ್ಗಳು, ರಿಪೆಸ್ಗಳು, ಅಪ್ಪಾಯಿಂಟ್ಮೆಂಟ್ಸ್ಗಳು ಇಂತಾ ಯಿತರ ಸಾಧನಗಳು ಯಿವುಗಳಲ್ಲಿ ಸೇರಿಸಲ್ಪಡತಕ್ಕದ್ದಲ್ಲ.

ಮತ್ತು ನಮ್ಮ ನಿಶ್ಚಯವೂ ಯಿಷ್ಟವೂ ಯಿರುವದೇನಂದರೆ, ಸೇರಿಸಲ್ಪಟ್ಟ ರಾಜ್ಯದ ಹಾಲೀ ಚಲವಾಣಿಯಲ್ಲಿರುವ ನ್ಯಾಯವಾದ ದರೋಬಸ್ತು ಚಿನ್ನ, ಬೆಳ್ಳಿ, ತಾಂಬ್ರ ನಾಣ್ಯಗಳು ಮತ್ತು ಈ ದಿವಸದಲ್ಲಿ ಯಾ ಇದಕ್ಕೆ ತರುವಾಯ ನಮ್ಮ ಅಧಿಕಾರದಿಂದ ಅಂತಾ ಮುದ್ರೆಯೊಡನೆ ಹೊಯಿಸಲ್ಪಡುವ ದರೋಬಸ್ತು ಚಿನ್ನ, ಬೆಳ್ಳಿ, ತಾಂಬ್ರ ನಾಣ್ಯಗಳು ನಮ್ಮ ಹೆಸರಿಗೂ ಬಿರುದುಗಳಿಗೂ ಅಂತಾ ಅಧಿಕಾರ ಸೇರಿಸಲ್ಪಟ್ಟಿದ್ದಾಗ್ಯೂ ಸದರೀ ಸೇರಿಸಲ್ಪಟ್ಟ ರಾಜ್ಯದ ಚಲಾವಣೆಯುಳ್ಳವ ನ್ಯಾಯವಾದ ನಾಣ್ಯವೆಂದೆಣಿಸಲ್ಪಟ್ಟು ಅಂಗೀಕರಿಸಲ್ಪಡತಕ್ಕದ್ದು. ಮತ್ತು ಸದರೀ ಸೇರಿಸಲ್ಪಟ್ಟ ರಾಜ್ಯಕ್ಕೆ ಒಳಪಟ್ಟ ಯಾವ ರಾಜ್ಯಕೋಸ್ಕರವಾಗಲಿ ಹಾಕಿಸಲ್ಪಟ್ಟು ಅದರಲ್ಲಿ ಚಲಾವಣೀ ಮಾಡಲ್ಪಟ್ಟ ಮತ್ತು ನಮ್ಮ ಹೆಸರನ್ನಾಗಲಿ, ಬಿರುದುಗಳನ್ನಾಗಲಿ ಅವುಗಳ ಪೈಕೀ ಯಾವ ಭಾಗವನ್ನಾಗಲಿ ಭಾಗಗಳನ್ನಾಗಲಿ ಉಂಟಾಗಿರುವ ನಾಣ್ಯಗಳು ಅಂತಾ ರಾಜ್ಯಗಳ ಚಲಾವಣೆಯುಳ್ಳ ಮತ್ತು ನ್ಯಾಯವಾದ ನಾಣ್ಯವಾಗಿರತಕ್ಕದ್ದೆಂದು ನಮ್ಮ ಇಸ್ತಿಹಾರ್ ಮೂಲಕ ತಿಳಿಸಲ್ಪಟ್ಟ ದರೋಬಸ್ತು ನಾಣ್ಯಗಳೂ ಅಂತಾ ಇಸ್ತಿಹಾರ್ ನಾಮೆಯ ಪ್ರಕಾರ ಇಯಿಂದ ಮುದ್ರಿಸಲ್ಪಟ್ಟು ಚಲಾವಣಿ ಮಾಡಲ್ಪಟ್ಟ ದರೋಬಸ್ತು ನಾಣ್ಯಗಳೂ ನಮ್ಮ ಹೆಸರು ಮತ್ತು ಕಿತಾಬ್ಗಳಿಗೆ ಅಧಿಕಾರ ಸೇರಿಸಲ್ಪಟ್ಟಿದ್ದಾಗ್ಯೂ ಅದರ ವಿಷಯದಲ್ಲಿ ನಮ್ಮ ಅಭಿಪ್ರಾಯವು ಮುಂದೆ ತಿಳಿಸಲ್ಪಡುವ ಪರಿಯಂತ ಅಂತಾ ರಾಜ್ಯಗಳ ನ್ಯಾಯ್ಯವಾಗಿಯೂ; ಚಲಾವಣೆಯುಳ್ಳದ್ದಾಗಿಯೂ ಯಿರತಕ್ಕದ್ದು.

ನಮ್ಮ ರಾಜ್ಯಭಾರದ ಮೂವತ್ತೊಂಬತ್ತನೆಯ ವರುಷವಾದ ಸಕ್ಸಾವಿರದ ಯಿಂಟುನೂರ ಯಪ್ಪತ್ತಾರನೇ ಇಸವೀ ಏಪ್ರೀಲ್ ಯಿಪ್ಪತ್ತೆಂಟನೇ ತಾರೀಖಿನಲ್ಲಿ ವಿಂಡ್ಸರ್ನೊಳಗಣ ನಮ್ಮ ಆಸ್ಥಾನದಲ್ಲಿ ಕೊಡಲ್ಪಟ್ಟಿತು.

ರಾಣಿಯವರನ್ನು ಭಗವಂತನು ರಕ್ಷಿಸಲಿ. ಘನವನ್ನು ಹೊಂದಿದ ವೈಸ್ರಾಯಿ ಮತ್ತು ಗವರ್ನರ್ ಜನರಲ್ ಆಫ್ ಇಂಡ್ಯಾ ಕೌನ್ಸಿಲ್ಯವರ

"ಬಮೋಜೀಬ್ ಹುಕ್ಕುಂ,"

T. H. THORNTON,
Offg. Secy. to the Govt. of India.